

# ಉದ್ಯಮ ಕಟ್ಟಿದ ಎಮ್ಮೆ ತಮ್ಮಣ್ಣ

■ ರಾಘವೇಂದ್ರ ಕೆ. ತೊಗರ್ಸಿ

'ಹುಚ್ಚುಕೋಡಿ ಮನಸು ಅದು ಹದಿನಾರರ ವಯಸು' ಎಂಬ ಎಚ್. ಎಸ್. ವೆಂಕಟೇಶಮೂರ್ತಿ ಅವರ ರಚನೆಯನ್ನು ಸಾಮಾನ್ಯವಾಗಿ ಬಹುತೇಕ ಕನ್ನಡಿಗರು ಕೇಳಿರುತ್ತೇವೆ. ಈ ಕವಿತೆ ಹದಿಹರೆಯದ ಉಮೇದಿನಲ್ಲಿರುವ ಯುವಜನಾಂಗದ ಮನೋಬಿಂಬದಂತೆಯೇ ಕಾಣಿಸುತ್ತದೆ. ಬಾಲ್ಯ ಮತ್ತು ಯೌವನದ ಸಂಗಮ ಕಾಲದಂತೆ ಇರುವ ಹದಿಹರೆಯ ಚಾಂಚಲ್ಯದಿಂದ ಕೂಡಿರುವುದು ಸಹಜ. ಆ ವಯಸ್ಸಿನ ಆಕರ್ಷಣೆ, ಒಂಟಿತನ, ಸಿಟ್ಟು, ಮೋಹದ ಜೊತೆ, ಮೊಬೈಲಿನ ಅತಿ ಪ್ರೀತಿ ಇನ್ನೇನೋ ಬಯಕೆಯೇ ಮನದಲ್ಲಿ ಹೊಯ್ದಾಡುತ್ತಿರುತ್ತದೆ. ಇದೇ ಕಾರಣಕ್ಕೆ ಹದಿಹರೆಯದ ಮಕ್ಕಳಿಗೆ ಮೊಬೈಲ್ ನಿರ್ಬಂಧದ ಕುರಿತ ಚರ್ಚೆಗಳೂ ಈಗ ಜಾಗತಿಕವಾಗಿ ನಡೆಯುತ್ತಿವೆ. ಇಂತಹ ಆರೋಪಕ್ಕೆ ಪಂಜಾಬಿನ ಈ ಯುವಕ ಹೊರತಾಗಿ ಹೊರಹೊಮ್ಮಿದ್ದಾರೆ. ಈ ಎಮ್ಮೆ ತಮ್ಮಣ್ಣನ ರಾಸುಗಳ ಮೇಲಿನ ಪ್ರೀತಿ ಉದ್ಯಮವನ್ನೇ ಕಟ್ಟಿಸಿದೆ. ದನ ಕಾಯುವ ಕಾಯಕದಿಂದಲೇ ವರ್ಷಕ್ಕೆ ಸುಮಾರು 70 ಲಕ್ಷ ರೂಪಾಯಿ ಗಳಿಸುತ್ತಿದ್ದು, ತಮ್ಮ ಭವಿಷ್ಯವನ್ನು ಪಶುಸಂಗೋಪನೆಗೆ ಅರ್ಪಿಸಿಕೊಳ್ಳುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಓದಿನಲ್ಲಿ ಆಸಕ್ತಿ ತೋರಿಸದ ಮಕ್ಕಳಿಗೆ 'ದನಾ ಕಾಯೋಕೆ ಹೋಗು' ಎಂದು ಬೈಯುವುದನ್ನು ಬಹುತೇಕರು ಕೇಳಿದ್ದೇವೆ. ಸಾಕಷ್ಟು ಮಂದಿ ತಮ್ಮ ಪೋಷಕರು ಇಲ್ಲವೇ ಶಿಕ್ಷಕರಿಂದ ಹಾಗೆ ಬೈಯಿಸಿಕೊಂಡೇ ಇರುತ್ತೇವೆ. ನಿಷ್ಪ್ರಯೋಜಕ ಎಂಬ ಹೀಯಾಳಿಕೆಯೇ ಅದರ ಮೂಲ. ಆದರೆ, ಆ ಉದ್ಯೋಗಕ್ಕೂ ಘನತೆಯ ಬದುಕಿದೆ ಎನ್ನುವುದನ್ನು ಡೇರಿ ಉದ್ಯಮ ಸಾಬೀತು ಮಾಡಿದೆ. ಆದರೂ 'ದನ ಕಾಯೋ' ಕೆಲಸದ ಬಗ್ಗೆ ಕೀಳರಿಮೆ ಇದ್ದೇ ಇದೆ. ಇತ್ತೀಚೆಗೆ ರಾಜಸ್ಥಾನ ಸರ್ಕಾರ 'ಗಾವ್ ಗ್ವಾಲಾ ಯೋಜನೆ'ಯನ್ನು ಜಾರಿಗೊಳಿಸುವ ಮೂಲಕ ಸುದ್ದಿಯಾಗಿತ್ತು. ಸರ್ಕಾರ ಆ ಹೊಸ ಯೋಜನೆ ಪ್ರಕಾರ ದನ ಮೇಯಿಸುವ ಕಾಯಕ ಜೀವಿಗಳಿಗೆ 10 ಸಾವಿರ ರೂಪಾಯಿ ಗೌರವ ಧನವನ್ನು ನೀಡುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಗುಂಪು ಗೋಪಾಲನೆ ಅಥವಾ ಸಂಘಟಿತ ಗೋಪಾಲನೆಯನ್ನು ಉತ್ತೇಜಿಸುವ ಸಂಬಂಧ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅದು ಸಜ್ಜಾಗಿದೆ.

ಆಡುವ ವಯಸ್ಸಿನಲ್ಲಿ ಎಮ್ಮೆ ಮೇಯಿಸುವುದನ್ನೇ ಕಾಯಕ ಮಾಡಿಕೊಂಡ ಪಂಜಾಬಿನ ಈ ಯುವಕ ಆ ರಂಗದಲ್ಲಿಯೇ ಉದ್ಯಮ ಕಟ್ಟಿದ್ದಾರೆ. ಕಳೆದ ಜನವರಿಗೆ 18 ವರ್ಷ ತುಂಬಿರುವ ಸೋಹಲ್ ಪ್ರೀತ್ ಸಿಂಗ್ ಸಿಧು ತನ್ನ 15ನೇ ವಯಸ್ಸಿನಲ್ಲಿಯೇ ಹೈನು ಉದ್ಯಮದ ಕನಸು ಕಂಡಿದ್ದರು. ರೈತ ಬಲ್ಬೀರ್ ಸಿಂಗ್ ಸಿಧು ಅವರ ಏಕ ಮಾತ್ರ ಪುತ್ರ. ಆತ ಪ್ರೌಢ ಶಾಲೆಯಲ್ಲಿ ಓದುವಾಗಲೇ ಪೋಷಕರ ಮನವೊಲಿಸಿ ನಾಲ್ಕಾರು ಎಮ್ಮೆಗಳನ್ನು ತೆಗೆದುಕೊಳ್ಳುತ್ತಾರೆ. ಆರಂಭದ ಅಂದಿನ ಒಟ್ಟು ಹೂಡಿಕೆ 1.20 ಲಕ್ಷ ರೂಪಾಯಿ ಎಂದು ಅಂದಾಜು. ಅದೇ ಹೂಡಿಕೆ ಮೂರು ವರ್ಷ ತುಂಬುವಷ್ಟರಲ್ಲಿ ಪ್ರತಿ ತಿಂಗಳು 6 ಲಕ್ಷ ರೂಪಾಯಿ ಸಂಪಾದಿಸುತ್ತಿದೆ.

ಪೋಷಕರ ಮನವೊಲಿಸಿ ಆರಂಭಿಕ ಹಂತದಲ್ಲಿ ಐದಾರು ಎಮ್ಮೆಗಳನ್ನು ಸಾಕಲು ಅಡಿಯಿಟ್ಟರು. ತಮ್ಮ ಉದ್ಯಮದಲ್ಲಿ ಏರುಗತಿಯ ಬೆಳವಣಿಗೆ ಕಂಡರು. ಅವರು ತಮಗೆ ಬಂದ ಲಾಭವನ್ನೆಲ್ಲ ಎಮ್ಮೆ ಆಕಳುಗಳ ಖರೀದಿಗೆ ಮರು ವಿನಿಯೋಗಿಸಿದರು. ಮೂರು ವರ್ಷದ ಅವಧಿಯಲ್ಲಿ ಅವರ ಕೊಟ್ಟಿಗೆಯಲ್ಲಿ 55 ಎಮ್ಮೆ 15 ಹಸು, ಕರುಗಳು ಸೇರಿ ನೂರಾರು ಜಾನುವಾರುಗಳು ನೆಲೆ ಕಂಡಿವೆ. ನಿತ್ಯವೂ ಸುಮಾರು 700 ಲೀಟರ್ ಹಾಲನ್ನು ಉತ್ಪಾದಿಸುತ್ತಾರೆ. ತಮ್ಮ 20 ಎಕರೆ ಜಮೀನನ್ನೂ ಡೇರಿ ಅಭಿವೃದ್ಧಿಗೆ ಮೀಸಲಿಟ್ಟಿದ್ದಾರೆ. ಅದೂ ಸಾಲದ್ದಕ್ಕೆ ಪಕ್ಕದ ಜಮೀನನ್ನೂ ಗುತ್ತಿಗೆಗೆ ಪಡೆದಿದ್ದಾರೆ. ಸೋಹಲ್ ನಿರ್ಭಯವಾಗಿ ಎಮ್ಮೆ ತಳಿ ಅಭಿವೃದ್ಧಿಯಲ್ಲಿ ಉಜ್ವಲ ಭವಿಷ್ಯವಿದೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಅನಿಶ್ಚಿತ ಭವಿಷ್ಯದ ಜೊತೆ ಜೂಜಿಗೆ ಇಳಿಯುವ ಯುವಕರ ನಡುವೆ ಸೋಹಲ್ ಪ್ರೀತ್ ಸಿಂಗ್ ಮಾದರಿಯಾಗಿದ್ದಾರೆ. ಸದ್ಯ ಅವರಿಗೆ ಪಶು ವೈದ್ಯಕೀಯ ಪದವಿ ಪಡೆಯುವ ಉದ್ದೇಶ ಇದೆ. ('ಎಮ್ಮೆ ತಮ್ಮಣ್ಣ' ಸಿನಿಮಾದಲ್ಲಿ ಎಮ್ಮೆ ಮೇಯಿಸುತ್ತಿದ್ದ ತಮ್ಮಣ್ಣ (ರಾಜಕುಮಾರ್) ಪಾಂಡಿತ್ಯ ಗಳಿಸಿದಂತೆ). ಎಮ್ಮೆ ತಳಿ ಅಭಿವೃದ್ಧಿಯೇ ಅವರ ಪ್ರಧಾನ ಕನಸಾಗಿದೆ. ಮುಂದಿನ ದಿನಗಳಲ್ಲಿ ಕನಿಷ್ಠ 500 ಎಮ್ಮೆಗಳಾದರೂ ತಮ್ಮ ಕೊಟ್ಟಿಗೆಯಲ್ಲಿ ಮೆಲುಕು ಹಾಕುತ್ತಿರಬೇಕು ಎನ್ನುವ ಮಹತ್ವಾಕಾಂಕ್ಷೆ ಅವರದ್ದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65